ಆ) ಸರ್ಕಾರದ ಮುಂದೆ ಪ್ರಸ್ತಾವನೆ ಇಲ್ಲ.

ಇ) ಉದ್ಭವಿಸುವುದಿಲ್ಲ.

871(1374) ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ): ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಂಗಾರಪೇಟೆ ತಾಲ್ಲೂಕಿನಲ್ಲಿರುವ ಸುಪ್ರಸಿದ್ಧ ಬಂಗಾರು ತಿರುಪತಿ ಹಾಗೂ ಕೋಟಿಲಿಂಗೇಶ್ವರ – ಕಮ್ಮಸಂದ್ರ ದೇವಸ್ಥಾನಗಳನ್ನು ಸಂದರ್ಶಿಸುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮವೇನು;

ಇ) ಈ ಕ್ಷೇತ್ರಗಳನ್ನು ಪ್ರವಾಸೋದ್ಯಮ ಇಲಾಖೆ ಗುರುತಿಸಿದೆಯೇ;

ಈ) ಇಲ್ಲದಿದ್ದಲ್ಲಿ ಇದನ್ನು ಗುರುತಿಸುವಂತಹ ಯೋಜನೆಯನ್ನು ಹಮ್ಮಿಕೊಳ್ಳಲಾಗುವುದೇ?

ಶ್ರೀ ಡಿ. ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು) :

ಅ) ಹೌದು.

ಆ) ಕೋಟಿ ಲಿಂಗೇಶ್ವರ ದೇವಾಲಯದ ಬಳಿ ಡಾರ್ಮಿಟರಿ ಸೌಲಭ್ಯವನ್ನು ನಿರ್ಮಿಸಿ ದೇವಸ್ಥಾನದ ಆಡಳಿತಕ್ಕೆ ವಹಿಸಿಕೊಡಲಾಗಿದೆ.

ಇ) ಹೌದು

ಈ) ಉದ್ಭವಿಸುವುದಿಲ್ಲ.

872(1375) ಶ್ರೀ ವೆಂಕಟಮುನಿಯಪ್ಪ ಬಿ.ಪಿ.(ಬೇತಮಂಗಲ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೇತಮಂಗಲ ಕ್ಷೇತ್ರದ ರಸ್ತೆಗಳು ಬಹಳಷ್ಟು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ರಸ್ತೆಗಳು ದುರಸ್ತಿಗೊಳಿಸಲು ಕೈಗೊಂಡಿರುವ ಕ್ರಮಗಳೇನು;

ಇ) ಇಲ್ಲದಿದ್ದಲ್ಲಿ, ಯಾವಾಗ ದುರಸ್ಥಿ ಮಾಡಲಾಗುವುದು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬಂದಿರುತ್ತದೆ.

ಆ) ಲಭ್ಯವಿರುವ ಅನುದಾನದಲ್ಲಿ ರಸ್ತೆಗಳ ದುರಸ್ಥಿ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ದುರಸ್ಥಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.

873(1376) ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಂಗಾರಪೇಟೆ ತಾಲ್ಲೂಕು ಕಾಮಸಮುದ್ರದಲ್ಲಿ 7–8 ವರ್ಷಗಳ ಹಿಂದೆ ಪ್ರಾರಂಭಿಸಲಾಗಿದ್ದ ವಿದ್ಯುತ್ ಉಪ ಕೇಂದ್ರದ ಕಾಮಗಾರಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕಾಮಗಾರಿಯನ್ನು ಪೂರ್ಣಗೊಳಿಸದೇ ಇರಲು ಕಾರಣಗಳೇನು;

ಇ) ಈ ಕಾಮಗಾರಿ ಪೂರ್ಣಗೊಳಿಸಲು ನಿಗದಿಯಾಗಿದ್ದ ಮೊತ್ತವೆಷ್ಟು, ಈವರೆಗೂ ಖರ್ಚು ಮಾಡಲಾದ ಮೊತ್ತವೆಷ್ಟು (ವಿವರಗಳನ್ನು ಒದಗಿಸುವುದು);

ಈ) ಈ ವಿದ್ಯುತ್ ಉಪ-ಕೇಂದ್ರ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಕಳೆದ 3 ವರ್ಷಗಳಿಂದ ಈ ಕಾಮಗಾರಿ ಮಂದಗತಿಯಲ್ಲಿ ಸಾಗಿರುವ ವಿಷಯ ಗಮನಕ್ಕೆ ಬಂದಿದೆ.

ಆ) ಈ ಸದರಿ ಸಬ್-ಸ್ಟೇಷನ್ನಿನ ನಿರ್ಮಾಣ ಕಾಮಗಾರಿಯನ್ನು ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ಮೆ: ಜ್ಯೋತಿ ಸ್ಟ್ರಕ್ಚರ್ಸ್, ಮುಂಬಯಿರವರಿಗೆ ದಿನಾಂಕ 20-4-2001ರಂದು ಕಾರ್ಯಾದೇಶವನ್ನು ನೀಡಿ ವಹಿಸಲಾಗಿತ್ತು. ಈ ಗುತ್ತಿಗೆದಾರರೊಡನೆ ಆದ ಕರಾರಿನ ಪ್ರಕಾರ ಸದರೀ ಗುತ್ತಿಗೆದಾರರು ಕೆಲಸವನ್ನು ವಹಿಸಿದ್ದ ದಿನದಿಂದ ಒಂದು ವರ್ಷದ ಒಳಗೆ ಅಂದರೆ, 20-3-2002 ರ ಅಂತ್ಯಕ್ಕೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿತ್ತು. ಆದರೆ, ಗುತ್ತಿಗೆದಾರರು ಬಹಳ ಮಂದಗತಿಯಿಂದ ಕೆಲಸ ನಿರ್ವಹಿಸುತ್ತಿರುವುದು ಗಮನಕ್ಕೆ ಬಂದಾಗ ಕ.ವಿ.ಪ್ರ.ನಿ.ನಿ. ಯಿಂದ ಆಗಿಂದಾಗ್ಗೆ ಕೆಲಸವನ್ನು ಶೀಘ್ರಗತಿಯಲ್ಲಿ ಮಾಡಿ ಮುಗಿಸಲು ಹಲವು ಬಾರಿ ನೋಟೀಸ್‌ಗಳನ್ನು ಜಾರಿಗೊಳಿಸಲಾಯಿತು. ಆದರೂ ಸಹ ಸದರೀ ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಲಿಲ್ಲ. ಇದು ಈ ಕಾಮಗಾರಿಯನ್ನು ಪೂರ್ಣಗೊಳಿಸುವುದರಲ್ಲಿ ಆದ ವಿಳಂಬಕ್ಕೆ ಮುಖ್ಯ ಕಾರಣ.

ಇ) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಯಾದ ಒಟ್ಟು ಮೊತ್ತ 271.73 ಲಕ್ಷ ರೂ.ಗಳು ಹಾಗೂ ಈವರೆವಿಗೂ ಖರ್ಚು ಮಾಡಲಾದ ಒಟ್ಟು ಮೊತ್ತ 126.93 ಲಕ್ಷ ರೂ.ಗಳು ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ವಿವರ	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಈವರೆವಿಗೂ ಖರ್ಚು ಮಾಡಲಾದ ವೆಚ್ಚ (ರೂ.ಲಕ್ಷಗಳಲ್ಲಿ)
1	ಸ್ಟೇಷನ್ ನಿರ್ಮಾಣಕ್ಕಾಗಿ	180.80	10.77
2	66 ಕೆ.ವಿ. ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣಕ್ಕಾಗಿ	90.92	116.16
	ಒಟ್ಟು ಮೊತ್ತ	**271.73**	**126.93**

ಸದರಿ ಸಬ್-ಸ್ಟೇಷನ್‌ಗೆ ಬೇಕಾಗಿರುವ 13 ಕಿ.ಮೀ. 66 ಕೆ.ವಿ. ವಿದ್ಯುತ್ ಪ್ರಸರಣ ಮಾರ್ಗವನ್ನು ಕೆ.ಜಿ.ಎಫ್. ನಿಂದ ಕಾಮಸಮುದ್ರಕ್ಕೆ ನಿರ್ಮಾಣ ಮಾಡಿ, ಚಾಲನೆಗೊಳಿಸಲಾಗಿರುತ್ತದೆ.

ಈ) ಈ ಕಾಮಗಾರಿಯ ಈ ಹಿಂದಿನ ಗುತ್ತಿಗೆದಾರರಾದ ಮೆ: ಜ್ಯೋತಿ ಸ್ಟ್ರಕ್ಚರ್ಸ್‌ರವರು ಸದರಿ ಕಾಮಗಾರಿಯನ್ನು ಕರಾರಿನ ಪ್ರಕಾರ ಪೂರ್ಣಗೊಳಿಸದಿದ್ದರಿಂದ, ಅವರಿಗೆ ವಹಿಸಲಾದ ಗುತ್ತಿಗೆಯನ್ನು ದಿನಾಂಕ 13-9-2004ರಂದು ರದ್ದುಪಡಿಸಿ, ಬೇರೊಬ್ಬ ಗುತ್ತಿಗೆದಾರರಿಗೆ ಈ ಕಾಮಗಾರಿಯನ್ನು

ಪೂರ್ಣಗೊಳಿಸಲು ಆಂಶಿಕ ಗುತ್ತಿಗೆ (ಪಾರ್ಷಿಯಲ್ 'ಟರ್ನ್ ಕೀ') ಆಧಾರದ ಮೇಲೆ ದಿನಾಂಕ 17-12-2004ರಂದು ವಹಿಸಲಾಗಿದೆ ಹಾಗೂ ಏಪ್ರಿಲ್ 2005ರ ಅಂತ್ಯದ ವೇಳೆಗೆ ಬಾಕಿ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ತಿಳಿಸಲಾಗಿರುತ್ತದೆ. ಬಾಕಿ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಸದರಿ ವಿದ್ಯುತ್ ಉಪ ಕೇಂದ್ರವನ್ನು ಏಪ್ರಿಲ್ 2005ರ ಅಂತ್ಯದೊಳಗೆ ಚಲನೆಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

874(1326): ಶ್ರೀಮತಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶ್ರೀರಂಗಪಟ್ಟಣ ತಾಲ್ಲೂಕು, ಗಂಜಾಂ ಶ್ರೀ ನಿಮಿಷಾಂಬಾ ದೇವಾಲಯದ ಆಡಳಿತ ಸರ್ಕಾರದ ಮುಜರಾಯಿ ಇಲಾಖೆಯ ವಶದಲ್ಲಿದೆಯೇ;

ಆ) ಈ ದೇವಾಲಯದ ಆಸ್ತಿ ಹಾಗೂ ಆದಾಯದ ವಿವರವೇನು, (ತಿಂಗಳುವಾರು);

ಇ) ಈ ದೇವಾಲಯದ ಆಡಳಿತವನ್ನು ಟ್ರಸ್ಟ್‌ಗೆ ವಹಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಈ) ಟ್ರಸ್ಟಿಗೆ ವಹಿಸುವ ಉದ್ದೇಶವಿದ್ದರೆ ಕಾರಣಗಳನ್ನು ತಿಳಿಸುವುದು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಹೌದು.

ಆ) ದೇವಾಲಯದ ಆಸ್ತಿ ಹಾಗೂ ಆದಾಯದ ವಿವರಗಳನ್ನು <u>ಅನುಬಂಧ-1</u>ರಲ್ಲಿ ಲಗತ್ತಿಸಲಾಗಿದೆ.

ಇ) ಕಂದಾಯ ಕಾರ್ಯದರ್ಶಿಗಳ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆ ಹಂತದಲ್ಲಿದೆ. ನ್ಯಾಯಾಲಯದ ತೀರ್ಮಾನದಂತೆ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಉದ್ಭವಿಸುವುದಿಲ್ಲ.

<u>ಅನುಬಂಧ 1</u>

<u>ಶ್ರೀ ನಿಮಿಷಾಂಬ ದೇವಾಲಯಕ್ಕೆ ಸೇರಿದ ಸ್ಥಿರ ಮತ್ತು ಚರ ಆಸ್ತಿಗಳ ವಿವರ ಹಾಗೂ ಆದಾಯದ ವಿವರ (ತಿಂಗಳವಾರು) ಈ ಕೆಳಗಿನಂತೆ ಇರುತ್ತದೆ.</u>

<u>ಸ್ಥಿರ ಆಸ್ತಿ</u>

1) ಸರ್ವೆ ನಂ.906ರಲ್ಲಿ 027 ಗುಂಟೆ
2) ಸರ್ವೆ ನಂ.907ರಲ್ಲಿ 0.08 ಗುಂಟೆ
3) ನಿವೇಶನ 1-70X165 ಅಡಿ ವಿಸ್ತೀರ್ಣಕ್ಕೆ

<u>ಚರ ಆಸ್ತಿ</u> ಈ ದೇವಾಲಯವನ್ನು ಇಲಾಖೆಯ ವಶಕ್ಕೆ ತೆಗೆದುಕೊಂಡ ಮೇಲೆ ಒಟ್ಟು 5.00 ಕೆ.ಜಿ.ಗೂ ಹೆಚ್ಚು ಚಿನ್ನ, 30.00 ಕೆ.ಜಿ.ಗೂ ಹೆಚ್ಚು ಬೆಳ್ಳಿ ಸಂಗ್ರಹವಾಗಿರುತ್ತದೆ.

I. ಸೇವಾ ಶುಲ್ಕ:-

ಏಪ್ರಿಲ್ 2003	3,00,161-00
ಮೇ 2003	3,95,958-00